ಯಾರೋ ದೂರು ಕೊಟ್ಟಿದಕ್ಕೆ ಪೋಲೀಸಿನವರು ಬಂದರು. 'ಮೊದಲು ಎಮ್ಮೆಗೆ ಹುಲ್ಲು ನೀರು ಕೊಡ್ರೀ ಮಿಕ್ಕಿದ ಮಾತು ಆಮೇಲೆ' ಎಂದರು ಪೋಲೀಸಿನವರು. ಎಮ್ಮೆ ತನಗೇನೂ ಗೊತ್ತೇ ಇಲ್ಲ ತನಗೇನೂ ಆಗೇ ಇಲ್ಲ ಎನ್ನುವಂತೆ ನಿಂತಿತ್ತು. ಪೋಲೀಸಿನವರೇ ಹುಲ್ಲು ನೀರು ಕೊಡು ಅಂದ ಮೇಲೆ ಅಲ್ಲಿದ್ದವರು ಹಸಿರು ಹುಲ್ಲನ್ನೂ ನೀರಿನ ಬಕೀಟನ್ನೂ ಎಮ್ಮೆಯ ಮುಂದೆ ತಂದಿಟ್ಟರು. ಆದರೆ ಎಮ್ಮೆ ತನ್ನ ಮುಂದೆ ಹುಲ್ಲು ನೀರು ಇದ್ದರೂ ಎಮ್ಮೆ ಆ ಕಡೆ ನೋಡ್ಲೇ ಇಲ್ಲ. 'ಯಾಕಮ್ಮಾ ಒದೆ ತಿಂದೇ ಸಾಕಾಗಿದೆಯಾ, ಸ್ವಲ್ಪ ಹುಲ್ಲು ತಿಂದು ನೀರು ಕುಡಿ' ಅಂತ ಸುಬ್ಬರಾಯಪ್ಪ ಅಂದು ಬೆನ್ನು ಸವರಿದರೂ ಎಮ್ಮೆ ಅಲ್ಲಾಡಲಿಲ್ಲ. ಸುಬ್ಬರಾಯಪ್ಪ ಹುಲ್ಲನ್ನು ಅದರ ಬಾಯಿ ಹತ್ತಿರ ಹಿಡಿದ. ಎಮ್ಮೆ ಬಾಯಿ ಬಿಡಲಿಲ್ಲ. ಬಕೀಟು ತುಂಬಾ ಇದ್ದ ನೀರಿಗೆ ಎಮ್ಮೆ ಮೂತಿನ ಅದ್ದಿದರೂ ಅದು ಬಾಯಿ ಬಿಟ್ಟು ನೀರು ಹೀರಲಿಲ್ಲ.

ಪೋಲೀಸಿನವರು ನಾಗರಾಜಪ್ಪನ ಹತ್ತಿರ ಬಂದು ಅವನ ಬೆನ್ನು ಸವರಿ 'ನೋಡಿ ನಾಗರಾಜಪ್ಪ ನಾನು ಯಾರ ಪರವೂ ಅಲ್ಲ ಯಾರ ವಿರೋಧವೂ ಅಲ್ಲ. ಪರಿಸ್ಥಿತಿ ಒಮ್ಮೊಮ್ಮೆ ಹಾಗೆ ಬಂದುಬಿಡುತ್ತೆ. ಇಲ್ಲಿ ಮೊದಲ ನೋಟಕ್ಕೆ ನಿಮ್ಮದೇ ತಪ್ಪು ಅನಿಸುತ್ತೆ. ಮೂರು ವರ್ಷದ ಹಸುಕಂದನನ್ನು ಬೀದಿಗೆ ಆಡಕ್ಕೆ ಬಿಟ್ಟದ್ದು ಮೊದಲ ತಪ್ಪಾದರೆ ಅದರ ಕಡೆ ಗಮನ ಕೊಡದಿರೋದು ಇನ್ನೊಂದು ತಪ್ಪು. ನಮ್ಮ ಬುದ್ಧಿವಂತಿಕೆಗೆ ಎಮ್ಮೆಯ ಬುದ್ಧಿವಂತಿಕೆಯನ್ನು ಹೋಲಿಸೋಕೆ ಆಗುತ್ತೇ. ಎಮ್ಮೆಗೆ ಇದು ಮಗು, ಇದರ ಮೇಲೆ ನಾನು ಕಾಲಿಟ್ಟರೆ ಅದು ಸತ್ತುಹೋಗುತ್ತೆ ಅನ್ನೋದೆಲ್ಲ ತಿಳಿಯುತ್ತೇ. ಅದು ಮೂಕ ಪ್ರಾಣಿ. ಅಂಥಾ ಪ್ರಾಣಿಗಳ ಹತ್ತಿರ ಚಿಕ್ಕ ಮಕ್ಕಳನ್ನು ಬಿಡೋದು ನಮ್ಮ ತಪ್ಪು. ಎಮ್ಮೆ ಗಾಬರೀಲಿ ಓಡಿದಾಗ ಮಗು ಅದರ ಕಾಲಿಗೆ ಸಿಕ್ಕಿದೆ ಅಷ್ಟೆ. ನಾನು ಆಸ್ಪತ್ರೆಗೆ ಹೋಗಿದ್ದೆ. ಡಾಕ್ಟರು ಮಗು ಜೀವಕ್ಕೇನೂ ಅಪಾಯ ಇಲ್ಲ. ಆದರೂ ತಕ್ಷಣಕ್ಕೆ ಏನೂ ಹೇಳಕ್ಕೆ ಆಗಲ್ಲ ಅಂದಿದಾರೆ. ನನಗನಿಸುತ್ತೆ ನಿಮ್ಮ ಮಗೂಗೆ ಏನೂ ಆಗಲ್ಲ' ಎಂದರು.

ಪೋಲೀಸಿನವರ ಮಾತಿಗೆ ನಾಗರಾಜಪ್ಪನ ಮನವೇನೂ ಕರಗಲಿಲ್ಲ. ಸುಬ್ಬರಾಯಪ್ಪ ತನ್ನ ಎಮ್ಮೆಯನ್ನು ಸವರುತ್ತಾ 'ಅಲ್ಲಾ ಕಣಮ್ಮ ನೀನೇನೋ ಗಾಬರಿಯಿಂದ ಓಡಿದೆ. ಆದರೆ ಅಲ್ಲಿ ಮಗು ಇರೋದನ್ನು ಚೂರು ಗಮನಿಸಬಾರದಿತ್ತಾ. ನೀನೇ ಹಾಲು ಕೊಟ್ಟು ಬೆಳೆಸಿದ ಮಗೂನ ನೀನೇ ಸಾಯಿಸೋದು ಯಾವ ನ್ಯಾಯ' ಎನ್ನುತ್ತಿದ್ದರೆ. ನನ್ನ ತಪ್ಪಾಯಿತು ಎನ್ನುವಂತೆ ಎಮ್ಮೆ ತಲೆಯಾಡಿಸುತ್ತಿತ್ತು. ಆದರೆ ಹುಲ್ಲು ನೀರು ಎರಡನ್ನೂ ದೂರ ಮಾಡಿತ್ತು.

ಸುಬ್ಬರಾಯಪ್ಪ ಪೋಲೀಸಿನವರ ಹತ್ತಿರ 'ನಾನು ನನ್ನ ಎಮ್ಮೆನ ಮನೆಗೆ ಹೊಡ್ಕೊಂಡು ಹೋಗ್ಲಾ' ಅಂತ ಕೇಳುತ್ತಿದ್ದಂತೆ ನಾಗರಾಜಪ್ಪ 'ಎಮ್ಮೆ ಕದಲಿಸೋ ಹಾಗಿಲ್ಲ. ಅದು ಇಲ್ಲೇ ಇರಬೇಕು ಇಲ್ಲಾ, ಇಲ್ಲೇ ಸಾಯಬೇಕು. ನನ್ನ ಹೊಟ್ಟೆ ಸಂಕಟ ಏನು ಎನ್ನೋದು ನಿನಗೂ ಗೊತ್ತಾಗಬೇಕು. ಬೇಕಾದ್ದು ಆಗ್ಲಿ, ಬೇಕಾದರೆ ನನ್ನ ಹೆಣ ಬೀಳಲಿ ಆದರೆ ನಾನು ಎಮ್ಮೆನ ಬಿಡಲ್ಲ' ಅಂದು ಕಿರುಚಿದ.

ಪೋಲೀಸಿನವರು 'ನೋಡಿ ನಾಗರಾಜಪ್ಪ ಈಗಾಗಲೇ ನೀವು ಎಮ್ಮೆಗೆ ಸಾಕಷ್ಟು ಹೊಡೆದಿದೀರ ಅನ್ನೋದು ಗೊತ್ತಾಗ್ತಾ ಇದೆ. ಸುಬ್ಬರಾಯಪ್ಪನ ಎಮ್ಮೆ ಅಂದರೆ ಅದು ಮಾಮೂಲಿ ಎಮ್ಮೆಯಂತಲ್ಲ. ಎಲ್ಲರ ಮನೆಯ ಎಮ್ಮೆ, ಇಡೀ ಊರಿನ ಹೆಮ್ಮೆ. ಅದು ನಮ್ಮ ಸ್ಟೇಷನ್ ಹತ್ತಿರ ಕೂಡಾ ಬರ್ತಿತ್ತು. ಯಾರು ಕೆಚ್ಚಲಿಗೆ ಕೈ ಹಾಕಿದರೂ ಹಾಲು ಕೊಡುತ್ತಿತ್ತು. ಅಲ್ಲ ನಾಗರಾಜಪ್ಪಾ ತನ್ನ ಹಾಲಿನಿಂದ ಇಡೀ ಊರನ್ನೇ ಕಾಪಾಡಿರುವ ಎಮ್ಮೆ ನಿನ್ನ ಮಗೂನ ಸಾಯಿಸೋಕೆ ಪ್ರಯತ್ನ ಮಾಡ್ತು ಅಂದ್ರೆ ನಂಬ್ತೀಯ. ನಿನ್ನ ಮಗೂಗೆ ಆದ ಸ್ಥಿತಿಗೆ ಎಮ್ಮೆಗೆ ದುಃಖ ಆಗಿಲ್ಲ ಅಂತೀಯ. ನೋಡು ಅದು ಹೇಗೆ ನಿಂತಿದೆ. ಹುಲ್ಲು ಬೇಡ ನೀರು ಬೇಡ, ನಿನ್ನ ಮಗು ಬದುಕಿ ಬಂದರೆ ಸಾಕು ಅನಿಸಿದೆ. ಮೂಕ ಪ್ರಾಣಿಗಳಿಗೂ ಭಾವನೆಗಳಿರುತ್ತವೆ. ಅದನ್ನು ವ್ಯಕ್ತಪಡಿಸೋಕೆ ಅವಕ್ಕೆ ಗೊತ್ತಾಗಲ್ಲ. ನಮಗೆ ತಿಳ್ಕೊಳೋಕೆ ಗೊತ್ತಾಗೋಲ್ಲ. ನೀನು ಎಮ್ಮೆನ ಕಟ್ಟಿಹಾಕಿದ್ದು ಬೆಳಗಿನ ಒಂಭತ್ತು ಗಂಟೆಗೆ ಇರಬಹುದು. ಅಲ್ಲಿಂದೀಚೆಗೆ ಅದು ಏನೂ ತಿಂದಿಲ್ಲ. ಈಗ ಹುಲ್ಲು ಕೊಟ್ಟರೂ ತಿನ್ತಿಲ್ಲ, ನೀರೂ ಕುಡೀತಿಲ್ಲ. ಅಂದ ಮೇಲೆ ಅದಕ್ಕೆ ನಿನ್ನ ಮಗೂಗೆ ಆದ ಸ್ಥಿತಿಯಿಂದ ಅದಕ್ಕೂ ನೋವಾಗಿದೆ ಅಂತ ಅರ್ಥ ಆಗಲ್ವೇ. ಮಕ್ಕಳು ದೇವರ ಸಮಾನ ಅಂತಾರೆ, ಹಾಗೆ ಪ್ರಾಣಿಗಳೂ ಸಹ' ಎಂದರು.

ಯಾವ ಮಾತುಗಳೂ ನಾಗರಾಜಪ್ಪನನ್ನು ಸಮಾಧಾನ ಮಾಡಲಿಲ್ಲ. ಆಸ್ಪತ್ರೆಯಲ್ಲಿದ್ದ ಹೆಂಡ್ತಿಯಿಂದ 'ಬೇಗ ಬರ್ಬೇಕಂತೆ' ಅಂತ ಸುದ್ದಿ ಬಂದಿದ್ರಿಂದ 'ಲೇ ಎಮ್ಮೆನ ಹುಷಾರಾಗಿ ನೋಡ್ಕೊಳ್ರೋ' ಅಂತ ಆಳುಗಳಿಗೆ ಹೇಳಿ ಆಸ್ಪತ್ರೆಗೆ ಓಡಿದ. ದಾರಿಯಲ್ಲೇ ಅವನಿಗೆ ಸಮಾಧಾನದ ಸುದ್ದಿ ಬಂತು. ಮಗೂಗೆ ಏನೂ ಅಪಾಯವಾಗಿಲ್ಲ. ಉಸಿರಾಟಕ್ಕೆ ಸ್ವಲ್ಪ ಕಷ್ಟವಾಗಿತ್ತು. ಅದು ಹಂತಹಂತವಾಗಿ ಈಗ ಸರಿಯಾಗಿದೆ. ಇನ್ನು ಅದಕ್ಕೆ ಯಾವುದೇ ಅಪಾಯವಿಲ್ಲ ಎನ್ನುವ ಸುದ್ದಿ ನಾಗರಾಜಪ್ಪನನ್ನು ಖುಷಿಪಡಿಸಿತು.

ವಾರ್ಡ್‌ಗೆ ಹೋಗಿ ಮಗೂನ ತಬ್ಬಿ ಪ್ರೀತಿಯಿಂದ ಮಾತಾಡಿಸಿದ. ಹೆಂಡತಿಗೂ ಸಮಾಧಾನವಾಗಿತ್ತು. ಡಾಕ್ಟರು ಹೇಳಿದ್ದರಿಂದ ಮಗೂನ ಕರ್ಕೊಂಡು ಮನೆಗೆ ಬಂದರು. ಅಲ್ಲೀವರೆಗೂ ಸುಬ್ಬರಾಯಪ್ಪ ತನ್ನ ಎಮ್ಮೆಯ ಬಳಿಯೇ ಕೂತಿದ್ದ. ಅವನು ಎಷ್ಟು ಪ್ರಯತ್ನ ಮಾಡಿದರೂ ಎಮ್ಮೆ ಹುಲ್ಲು ನೀರು ಒಂದನ್ನೂ ಮುಟ್ಟಿರಲಿಲ್ಲ. 'ಸುಬ್ಬರಾಯಪ್ಪಾ ನನ್ನ ಮಗು ಬದುಕಿ ಬಿಟ್ಟಿತು. ಏನೂ ಅಪಾಯ ಇಲ್ಲ ಅಂದಿದಾರೆ ಡಾಕ್ಟರು' ಅಂತ ಜೋರಾಗಿ ಕಿರುಚುತ್ತಾ ಬಂದ ನಾಗರಾಜಪ್ಪ. ಸುಬ್ಬರಾಯಪ್ಪನಿಗೂ ಆನಂದದ ಕಣ್ಣೀರು ಬಂತು. ನಾಗರಾಜಪ್ಪನ ಹೆಂಡತಿ ಮಗೂನ ಎತ್ತಿಕೊಂಡಿದ್ದೋಳು ಸೀದ ಬಂದು ಎಮ್ಮೆಯ ಬಳಿ ನಿಂತು ಮಗೂನ ಅದಕ್ಕೆ ತೋರಿಸಿದಳು. ಎಮ್ಮೆ ಒಮ್ಮೆ ತನ್ನ ತಲೆ ಕೊಡವಿತು. ಮಗೂನೇ ನೋಡಿತು. ಸುಬ್ಬರಾಯಪ್ಪ ನಾಗರಾಜಪ್ಪನ ಕಡೆ ನೋಡಿ ಒಂದು ಪಾತ್ರೆ ತಗೊಂಡ್ಬಾ ಅಂದ. ಪಾತ್ರೆ ಬಂದೊಡನೆ ಎಮ್ಮೆಯ ಕೆಚ್ಚಲಿಗೆ ಕೈ ಹಾಕಿ ಹಾಲು ಹಿಂಡಿದ. ಕ್ಷಣ ಮಾತ್ರದಲ್ಲಿ ಪಾತ್ರೆ ತುಂಬಿತು. ಅದನ್ನು ಮಗೂಗೆ ಕುಡಿಸಿದ. ಮಗು ಖುಷಿಯಿಂದ ಹಾಲು ಕುಡೀತು. ಸುಬ್ಬರಾಯಪ್ಪ ಎಮ್ಮೆಯ ಬೆನ್ನು ಸವರಿ 'ಎಲ್ಲಾ ಸರಿಯಾಯ್ತಲ್ಲ ಇನ್ನಾದರೂ ಹುಲ್ಲು ತಿನ್ನು ನೀರು ಕುಡಿ' ಅಂದ. ಆಗ ಎಮ್ಮೆ ಹುಲ್ಲು ತಿನ್ನಲಾರಂಭಿಸಿತು. ಆಗಾಗ ನೀರನ್ನೂ ಕುಡೀತು.

'ಏನಪ್ಪಾ ಈಗ ನನ್ನ ಎಮ್ಮೆನ ನಾನು ಕರ್ಕೊಂಡು ಹೋಗಬಹುದಾ' ಅಂತ ಸುಬ್ಬರಾಯಪ್ಪ ಕೇಳಿದಾಗ ನಾಗರಾಜಪ್ಪ ಅವನನ್ನು ತಬ್ಬಿ 'ನಾನು ಹುಚ್ಚನಾಗಿದ್ದೆ, ನನ್ನ ಕ್ಷಮಿಸು' ಎಂದು ಮನೆಯೊಳಗೆ ಹೋಗಿ ಒಂದು ಮೊರದಲ್ಲಿ ಅಕ್ಕಿ, ಬೆಲ್ಲ, ಬಾಳೆಹಣ್ಣು ಎಲ್ಲವನ್ನೂ ತಂದು ಎಮ್ಮೆಯ ಮುಂದಿಟ್ಟು 'ನನ್ನ ಕ್ಷಮಿಸು ತಾಯಿ. ಇದನ್ನು ಸ್ವೀಕರಿಸು' ಎಂದು ಎಮ್ಮೆಗೆ ಕೈ ಮುಗಿದ. 'ನಿನ್ನನ್ನು ಕ್ಷಮಿಸಿದೀನಿ' ಎನ್ನುವಂತೆ ಎಮ್ಮೆ ಅವನು ಕೊಟ್ಟ ಅಕ್ಕಿ ಬೆಲ್ಲ ಬಾಳೆಹಣ್ಣು ಎಲ್ಲವನ್ನೂ ತಿಂದಿತು.

ಸುಬ್ಬರಾಯಪ್ಪನ ಎಮ್ಮೆಗೆ ಬಂದ ಕಂಟಕ, ನಾಗರಾಜಪ್ಪನ ಮಗನಿಗೆ ಬಂದ ಕಂಟಕ ಎರಡೂ ಒಟ್ಟಿಗೇ ಪರಿಹಾರವಾಗಿದ್ದು ಇಡೀ ಊರಿಗೇ ನೆಮ್ಮದಿಯಾಯಿತು.

■

## ಸಂತೆ

ಬದುಕು
ಒಂದು ಸಂತೆ;
ಸುಗಮ ವ್ಯವಹಾರಕೆ
ಬೇಕೇ ಬೇಕು
ನೋಟಿನ ಕಂತೆ!

★ ಕೆ.ಬಿ.ರಂಗಸ್ವಾಮಿ




ಈಶ್ವರ